# ಮೈಸೂರಿನಲ್ಲಿ ಶ್ರೀಭಂಡಾರಕೇರಿಮಠದ ವೆಂಕಟಾಚಲಧಾಮದ ಉದ್ಘಾಟನೆ  ಹಾಗೂ ಶ್ರೀನಿವಾಸದೇವರು ಹಾಗೂ ಶ್ರೀರಾಘವೇಂದ್ರ ಮೃತ್ತಿಕಾವೃಂದಾವನ ಪ್ರತಿಷ್ಠಾಪನ ಮಹೋತ್ಸವ

ಶ್ರೀಭಂಡಾರಕೇರಿ ಮಠಾಧೀಶರಾದ ಶ್ರೀವಿದ್ಯೇಶತೀರ್ಥರ ನೇತೃತ್ವದಲ್ಲಿ ಮೈಸೂರಿನ ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದ ಬಳಿ ನಿರ್ಮಾಣಗೊಂಡ ವೆಂಕಟಾಚಲಧಾಮದ ಉದ್ಘಾಟನೆ ಹಾಗೂ ಶ್ರೀನಿವಾಸದೇವರು ಮತ್ತು ಶ್ರೀರಾಘವೇಂದ್ರ ಮೃತ್ತಿಕಾವೃಂದಾವನ ಪ್ರತಿಷ್ಠಾಪನ ಮಹೋತ್ಸವು ವೈಭವದಿಂದ ಸಪ್ತಾಹ ಪರ್ಯಂತ ನಡೆಯಿತು. ವಿದ್ವಾನ್ ಶ್ರೀಕೃಷ್ಣಕುಮಾರ ಆಚಾರ್ಯರ ನೇತೃತ್ವದ ಯಜ್ಞರ ತಂಡವು ಪ್ರತಿಷ್ಠಾಪನ  ಅಂಗವಾದ ಹೋಮಾದಿ  ವಿಧಿವಿಧಾನಗಳನ್ನು ಯಶಸ್ವಿಯಾಗಿ ನಿರ್ವಹಿಸಿತು. ೧೮-೫-೨೦೧೦ರಂದು ಉಗ್ರಾಣ ಮೂಹೂರ್ತ, ಅಗ್ನಿ ಸ್ಥಾಪನೆ, ಪ್ರಾರ್ಥನೆ ಮುಂತಾದ ಕಾರ್ಯಕ್ರಮವು ನಡೆಯಿತು. ೨೪ರವರೆಗೆ ವಿವಿಧ ಹೋಮಗಳು ನಡೆದವು. ೨೩ರಂದು ಶ್ರೀಪೇಜಾವರ ಕಿರಿಯಪಟ್ಟದ ವಿಶ್ವಪ್ರಸನ್ನತೀರ್ಥರು ತಮ್ಮ ಅಮೃತಹಸ್ತದಿಂದ ಸಿಂಹ ಲಗ್ನದಲ್ಲಿ ಪ್ರತಿಷ್ಠಾಪನ ಮಹೋತ್ಸವವನ್ನು ನೆರವೇರಿಸಿದರು. ೨೪ರಂದು ಶ್ರೀಪೇಜಾವರ ಮಠದ ವಿಶ್ವೇಶತೀರ್ಥರು ವಿಶೇಷ ಸಾನಿಧ್ಯಸಂಪತ್ತಿಗಾಗಿ ತಮ್ಮ ಅಮೃತಹಸ್ತದಿಂದ ೧೦೮ ಕುಂಭಾಭಿಷೇಕವನ್ನು ನೆರವೇರಿಸಿದರು.

೨೩,೨೪ರಂದು ಸಾರ್ವಜನಿಕರಿಗೆ ಪ್ರಸಾದವನ್ನು ವಿತರಿಸಲಾಯಿತು. ಸಂಜೆ ಪೇಜಾವರಶ್ರೀಪಾದರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮವು ನಡೆಯಿತು. ಶ್ರೀಪರಕಾಲ

ಮಠದ ಶ್ರೀಶ್ರೀ ಅಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಶ್ರೀಪಾದರು ಸಾನಿಧ್ಯ ವಹಿಸಿದರು. ಗಣಪತಿ ಸಚ್ಚಿದಾನಂದಾಶ್ರಮದ ಕಾರ್ಯದರ್ಶಿಗಳಾದ ಮಾನಸದತ್ತರು ಆತಿಥ್ಯ ವಹಿಸಿದ್ದರು.

ಶ್ರೀಸಂದೇಶಸ್ವಾಮಿ (ಮಾಜಿ ಮಹಾಪೌರರು, ಮೈಸೂರು)ಹಾಗೂ ನಗರಪಾಲಿಕೆ ಸದಸ್ಯರಾದ ಶ್ರೀಶಂಕರಪ್ಪ ಭಾಗವಹಿಸಿದ್ದರು. ಶ್ರೀಭಂಡಾರಕೇರಿಮಠಾಧೀಶರು ಕಟ್ಟಡ ನಿರ್ಮಾಣ ಹಾಗೂ ಪ್ರತಿಷ್ಠಾಪನ ಮಹೋತ್ಸವ ಸೇವೆ ಸಲ್ಲಿಸಿದ ಎಲ್ಲಾ ದಾನಿಗಳನ್ನು ಸನ್ಮಾಸಿದರು. ಇದೇ ಸಂದರ್ಭದಲ್ಲಿ ಶ್ರೀಭಂಡಾರಕೇರಿಮಠದ ಶ್ರೀಭಾಗವತಾಶ್ರಮ ಪ್ರತಿಷ್ಠಾನ ಟ್ರಸ್ಟಿನಿಂದ ಸ್ವಸಹಾಯ ಸಮುಚ್ಚಯ ಬುದ್ಧಿಮಾಂದ್ಯ ಮಕ್ಕಳ ಶಾಲೆಗೆ ೧ಲಕ್ಷ ರೂ. ನಿಧಿಯನ್ನು ಶ್ರೀಪಾದರು ನೀಡಿ ಆಶೀರ್ವದಿಸಿದರು. ಎಲ್ಲಾ ಶ್ರೀಗಳವರ ಆಶೀರ್ವಚನದ ಬಳಿಕ ಸಭೆ ಸಮಾಪ್ತಿಗೊಂಡಿತು.

******